ಶ್ರೀ ಜಿ.ಎಚ್. ಅಶ್ವತ್ತರೆಡ್ಡಿ: ಇನ್ನು ಒಂದೂವರೆ ವರ್ಷದಲ್ಲಿ ಅದನ್ನು ಕಂಪ್ಲೀಟ್ ಮಾಡುತ್ತೇವೆ. ಸುಮಾರು 30 ಲಕ್ಷ ರೂಪಾಯಿ ಹೆಚ್ಚು ಖರ್ಚಾಗುತ್ತದೆ.

ಅಂತರಜಲ ಮಟ್ಟ ಇಳಿಮುಖವಾಗಿರುವ ತಾಲ್ಲೂಕುಗಳ ಸಂಖ್ಯೆ

2156 - ಶ್ರೀ ರಾಜುಗೌಡ (ಹನೂರು) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಹಾಗೂ ಎಷ್ಟು ತಾಲ್ಲೂಕುಗಳಲ್ಲಿ ಅಂತರ್ಜಲಮಟ್ಟ ಇಳಿಮುಖವಾಗಿದೆ.

ಆ) ಇದನ್ನು ಸರಿಯಾಗಿಸಲು ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳೇನು?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) ರಾಜ್ಯದ 17 ಜಿಲ್ಲೆಗಳ 117 ತಾಲ್ಲೂಕುಗಳಲ್ಲಿ ಅಂತರ್ಜಲವು ಇಳಿಮುಖವಾಗಿರುವುದು.

ಆ) ಅಂತರ್ಜಲ ಮರುಪೂರೈಕೆ ವಿಧಾನಗಳ ಬಗ್ಗೆ ಸಮೀಕ್ಷೆಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ರಾಜುಗೌಡ: ಸ್ವಾಮಿ ಎಷ್ಟು ತಾಲ್ಲೂಕುಗಳಲ್ಲಿ ಮತ್ತು ಯಾವಯಾವ ಜಿಲ್ಲೆಯಲ್ಲಿ ಈ ಅಂತರಜಲ ಮಟ್ಟ ಕಡಿಮೆಯಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ.ಎಲ್. ಉಸ್ತಾದ್: ಸನ್ಮಾನ್ಯ ಅಧ್ಯಕ್ಷರೆ 17 ಜಿಲ್ಲೆಗಳ ಪೈಕಿ ಒಟ್ಟು 117 ತಾಲ್ಲೂಕುಗಳಲ್ಲಿ ಗ್ರೌಂಡ್ ವಾಟರ್ ಇಳಿಮುಖವಾಗಿದ್ದು ಕಂಡುಬಂದಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಿ. ರಾಜುಗೌಡ: ಮಳೆ ನೀರು ಏನು ಹರಿಯುತ್ತದೆಯೋ ಆ ಮಳೆ ನೀರನ್ನು ಸಣ್ಣ ಸಣ್ಣ ಹಳ್ಳಕೊಳ್ಳ ಮತ್ತು ತೊರೆಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ಆ ಮಳೆನೀರನ್ನು ಭೂಮಿಗೆ ಇಳಿಯುವಂತೆ ಮಾಡಿ ಅಂತರ್ಜಲ ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದು ಪ್ರಶ್ನೆ ಹಳ್ಳಕೊಳ್ಳಗಳು ಇಲ್ಲದಿದ್ದರೆ ಮಳೆ ನೀರು ಬಿದ್ದಾಗ ಆ ಮಳೆ ನೀರು ಪೋಲಾಗುತ್ತದೆ. ಅದನ್ನು ತಡೆಗಟ್ಟುವ ಸಲುವಾಗಿ ಪ್ರತಿಯೊಂದು ಹಳ್ಳಕೊಳ್ಳಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ತನ್ಮೂಲಕ ನೀರನ್ನು ಕೆಳಗೆ ಇಳಿಸಿ ಜಲಸಂಗ್ರಹ ಜಾಸ್ತಿ ಮಾಡುವ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರಾ? ಅಂಥ ಕಾರ್ಯಕ್ರಮ ಏನಾದರೂ ಸರ್ಕಾರದಲ್ಲಿದೆಯೆ?

ಶ್ರೀ ಎಂ.ಎಲ್. ಉಸ್ತಾದ್: ಈ ವರ್ಷ "Artifical récharge of ground water" ಎಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದರ ಸಲುವಾಗಿ ಫಸ್ಟ್ ಟೈಂ ಎಕ್ಸ್‌ಪರಿಮೆಂಟ್ ಮಾಡುತ್ತಿದ್ದೇವೆ. ಇದಕ್ಕೆ 30 ಲಕ್ಷ ರೂಪಾಯಿ ಈ ವರ್ಷ ನಿಗದಿಪಡಿಸಲಾಗಿದೆ. 17 ಜಿಲ್ಲೆಗಳ 117 ತಾಲ್ಲೂಕಿನಲ್ಲಿ ಏನು ಇಳಿಮುಖವಾಗುತ್ತಿದೆ ಅಂತರ್ಜಲ ಮಟ್ಟ ಅದಕ್ಕೆ ಕಾರಣ ಬೋರ್‌ವೆಲ್‌ಗಳನ್ನು ಹೆಚ್ಚಾಗಿ ತೆಗೆದಿರುವುದು ಕಳೆದ ಎರಡು ದಶಕದಲ್ಲಿ ನಾಲ್ಕು ಪಟ್ಟು ಅಂತರ್ಜಲ ಕೆಳಗೆ ಹೋಗಲಿಕ್ಕೆ ಹತ್ತಿದೆ. ಈ ಸಲ 30ಲಕ್ಷ ರೂಪಾಯಿ ಇದರ ಸಲುವಾಗಿಯೇ ನಿಗದಿಪಡಿಸಲಾಗಿದೆ. ಅಂದರೆ ಒಂದು ಹನಿ ನೀರು ಸಹ ವೇಸ್ಟ್ ಆಗದಂತೆ ಮಾಡಬೇಕು ಎಂದು ಒಂದು ಎಕ್ಸ್‌ಪರಿಮೆಂಟ್ ಎಂದು ತೆಗೆದುಕೊಂಡಿದ್ದೇವೆ. ಅವರು ಹೇಳಿದಹಾಗೆ ಎಲೆಲಿ ನೀರು ಹೋಗುತದೆ ಆ ನೀರು ಹರಿದುಹೋಗದೇ

ಇರುವ ರೀತಿ ನೋಡಿಕೊಳ್ಳುವಹಾಗೆ ಕಾರ್ಯಕ್ರಮವನ್ನು ಈ ವರ್ಷ ಹಾಕಿಕೊಂಡಿದ್ದೇವೆ. ಈ ಸಲ ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ : ಆಂತರ್ಜಲ ಇಳಿಮುಖವಾಗುವುದಕ್ಕೆ ಮುಖ್ಯ ಕಾರಣ ಏನೆಂದರೆ ತಾವು ತಾಲ್ಲೂಕಿನಲ್ಲಿ ಲಭ್ಯವಾಗತಕ್ಕ ಗ್ರೌಂಡ್ ವಾಟರ್ ಗ್ರಹಿಸಿ ಅದಕ್ಕೆ ತಕ್ಕಂತೆ ಕೊಳವೆ ಬಾವಿ ತೆಗೆದರೆ ಈ ಪ್ರಶ್ನೆ ಬರುವುದಿಲ್ಲ. ಎಲ್ಲೆಲ್ಲಿ ಲಭ್ಯವಿಲ್ಲವೋ ಅದಕ್ಕಿಂತ ಜಾಸ್ತಿ ಕೊಳವೆ ಬಾವಿ ತೆಗೆದು ಕಾರಣ ಜಲಮಟ್ಟ ಕಡಿಮೆಯಾಗಿದೆ. ದಯಮಾಡಿ ಪ್ರತಿಯೊಂದು ತಾಲ್ಲೂಕಿನಲ್ಲಿ ತಾವು ಸಮೀಕ್ಷೆ ಮಾಡಿಸಬೇಕು ಎಷ್ಟು ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಹಾಕಿಸುವುದಕ್ಕೆ ಸಾಧ್ಯ ಎಂದು. ಅದಕ್ಕಿಂತ ಜಾಸ್ತಿ ಹಾಕಿದಾಗ ಇಂಥ ಪರಿಸ್ಥಿತಿ ಉಂಟಾಗುತ್ತದೆ. ದಯಮಾಡಿ ಇದರ ಬಗ್ಗೆ ಸರ್ಕಾರ, ಯೋಚನೆ ಮಾಡುತ್ತದೆಯೆ?

ಶ್ರೀ ಎಂ.ಎಲ್. ಉಸ್ತಾದ್: 1973ನೇ ಇಸವಿಯಿಂದ ಇವತ್ತಿನವರೆಗೆ ಇಡೀ ನಮ್ಮ ರಾಜ್ಯದಲ್ಲಿ 1540 ಬಾವಿಗಳಲ್ಲಿ ಈ ಫ್ಲಕ್ಚುಯೇಷನ್ ಆಫ್ ವಾಟರ್ ಅನ್ನು ಕಂಡುಹಿಡಿದಿದ್ದೇವೆ. ಆದರೆ 20 ವರ್ಷಗಳಿಂದ ಏನಾಗಿದೆಯೆಂದರೆ there ix no legislation for drilling of these borewells so far as urban areas and rural areas are concerned. ಹಾಗಾಗಿ ಹಾಗೇಯೇ ಕೊರೆಯುವುದಕ್ಕೆ ಹತ್ತಿದ್ದೇವೆ. ಅದರ ಸಲುವಾಗಿ ಇದರ ಬಗ್ಗೆ ಒಂದು ಲೆಜಿಸ್ಲೇಷನ್ ತರಲಿಕ್ಕೆ ಸರ್ಕಾರ ವಿಚಾರ ಮಾಡುತ್ತಿದೆ. ಈಗ ಎಕ್ಸ್‌ಪರಿಮೆಂಟ

ಮಾಡುತ್ತಿದ್ದೇವೆ. ಅದರ ಸಲುವಾಗಿ 30 ಲಕ್ಷ ರೂಪಾಯಿ ಈ ವರ್ಷ ನಿಗದಿಪಡಿಸಿದ್ದೇವೆ. ಈಗ ತಾವು ಏನು ಹೇಳುತ್ತೀರಿ ಅದು ಆಗಿರುವುದು ನಿಜ ಆಂತರ್ಜಲ day by day it is declining because of drilling of these borewells. That is why this year we are making an experment for this purpose only

30 ಲಕ್ಷ ರೂಪಾಯಿ ನಾವು ಇದಕ್ಕಾಗಿ ಇಟ್ಟಿದ್ದೇವೆ. ಈ ಪ್ರಕಾರವಾಗಿ ಸಮೀಕ್ಷೆ ಮಾಡಿ ಆಂತರ್ಜಲ ಮಟ್ಟ ಕೆಳಗೆ ಹೋಗದಂತೆ ಈ ಸಲ ನೋಡಿಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ: ಮಾನ್ಯ ಅಧ್ಯಕ್ಷರೇ ಇರತಕ್ಕ ಪರಿಸ್ಥಿತಿಯನ್ನು ಆಲೋಚನೆ ಮಾಡಿದರೆ ತೀರಾ ಭಯಾನಕವಾದ ಪರಿಸ್ಥಿತಿಗೆ ನಾವು ಹೋಗುತ್ತಿದ್ದೇವೆ. ಇದನ್ನು ಆದಷ್ಟು ಬೇಗ ಸರಿ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ದೇಶದ ಹೊರಗಡೆಯಿಂದಾಗಲೀ ಪರಿಣತರನ್ನು ಗೊತ್ತು ಮಾಡಿ ಇದಕ್ಕೆ ಪರಿಹಾರ ಕಂಡುಹಿಡಿಯಬೇಕು. ಇದಕ್ಕೆ ಪರಿಹಾರ ಏನು ಎಂದು ಆದಷ್ಟು ಬೇಗ ತಿಳಿದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದು ಮಾನ್ಯ ಮಂತ್ರಿಗಳ ಉತ್ತರದಿಂದ ಸ್ಪಷ್ಟವಾಗುತ್ತಿಲ್ಲ. ಆದ್ದರಿಂದ ಪರಿಣತರನ್ನು ಜಾಗ್ರತೆ ಗೊತ್ತುಮಾಡಿ ನೀರನ್ನು ಎಲ್ಲೆಲ್ಲಿ ತಡೆಗಟ್ಟಲು ಸಾಧ್ಯವೆಂದು ತಿಳಿದುಕೊಳ್ಳಬೇಕು. ಮಾನ್ಯ ರಾಜುಗೌಡರು ಹೇಳಿದಹಾಗೆ ಅದು ಒಂದು ಸಾಮಾನ್ಯವಾಗಿ ನಾವು ತಿಳಿದುಕೊಂಡಿರತಕ್ಕ ವಿಷಯ. ಆದರೆ ಈ ವಿಚಾರದಲ್ಲಿ ಹೆಚ್ಚು ಪರಿಣತರಾಗಿರುವವರನ್ನು ಕರೆಸಿ ಸಮಾಲೋಚನೆ ಮಾಡುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು. ಈ ದಿಸೆಯಲ್ಲಿ ಸರ್ಕಾರ ಏನು ಆಲೋಚನೆ ಮಾಡುತ್ತದೆ?

ಶ್ರೀ ಎಂ.ಎಲ್. ಉಸ್ತಾದ್: ಮಾನ್ಯ ಸದಸ್ಯರು ಹೇಳಿದಂತಹದ್ದನ್ನು ಗಮನದಲ್ಲಿ ಇಟ್ಟುಕೊಂಡು ಈ ಸಲ ಮಾಡುತ್ತೇವೆ.